## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 219/2019**

ಚಾಸಾ-1 & 7 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 07-03-2026

| | | |
|---|---|---|
| ಹೆಸರು | : | ಸಂತೋಷ |
| ತಂದೆಯ ಹೆಸರು | : | ಶಂಕರ ರಾಠೋಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | Police Inspector ಲೋಕಾಯುಕ್ತ |
| ವಾಸಸ್ಥಳ | : | ಬೀದರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ದಿನಾಂಕಃ 20-10-2017 ರಿಂದ 01-11-2018 ರವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿನಾಂಕಃ 23-10-2017 ರಂದು ನಾನು, ಚಾಸಾ 4, 5 ರವರು ನ್ಯಾಷನಲ ಫಂಕ್ಷನ ಹಾಲ ಹತ್ತಿರ ಗಸ್ತು ಕರ್ತವ್ಯದಲ್ಲಿದ್ದಾಗ, ಗುಡ್ಡೆವಾಡ ಗ್ರಾಮದಿಂದ ಒಂದು ಟಿಪ್ಪರನಲ್ಲಿ ಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವುದಾಗಿ ಖಚಿತ ಭಾತ್ಮಿ ಬಂದ ಮೇರೆಗೆ, ಚಾಸಾ 2 ಮತ್ತು 3 ರವರನು ಬರಮಾಡಿಕೊಂಡು ಸುಮಾರು 9-20 ಕ್ಕೆ ಅಫಜಲಪೂರದ ಬಸವೇಶ್ವರ ವೃತ್ತದಿಂದ ಹೋಗಿ ನೋಡಲಾಗಿ, ದುದನಿ ರಸ್ತೆಗೆ ಒಂದು ಟಿಪ್ಪರ ಹೋಗುತ್ತಿರುವುದು ಗಮನಿಸಿ, ಸದರಿ ಟಿಪ್ಪರನ್ನು ನಮ್ಮ ಸರಕಾರಿ ಜೀಪನಿಂದ ಬೆನ್ನತ್ತಿದಾಗ ಟಿಪ್ಪರ ಚಾಲಕನು ನಮ್ಮ ವಾಹನವನ್ನು ನೋಡಿ ಮಾಡಬಾಳ ತಾಂಡಾ ಹತ್ತಿರ ಟಿಪ್ಪರ ನಿಲ್ಲಿಸಿ ಓಡಿಹೋಗಿರುತ್ತಾನೆ. ಸದರಿ ಟಿಪ್ಪರ ಹತ್ತಿರ ಹೋಗಿ ನೋಡಿ

ಪರಿಶೀಲಿಸಿದಾಗ ಅದರಲ್ಲಿ ಮರಳು ಇರುವುದು ಖಚಿತಪಡಿಸಿಕೊಂಡು ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ 9-35 ರಿಂದ 10-35 ರವರೆಗೆ ಜಪ್ತಿ ಪಂಚನಾಮೆ ಮಾಡಿ, ನಂತರ ಜಪ್ತಿ ಪಡಿಸಿಕೊಂಡ ವಾಹನವನ್ನು ಸಿಬ್ಬಂದಿ ಸಹಾಯದಿಂದ ಠಾಣಾ ಆವರಣಕ್ಕೆ ತಂದು ಮುಂದಿನ ತನಿಖೆಗಾಗಿ ಚಾಸಾ 6 ರವರಿಗೆ ಜಪ್ತಿ ಪಂಚನಾಮೆ ಮತ್ತು ವರದಿ ಸಲ್ಲಿಸಿರುತ್ತೇನೆ.

ದಿಃ 25-12-2017 ರಂದು ಚಾಸಾ 6 ರವರಿಂದ ಕಡತವನ್ನು ಪಡೆದು ತನಿಖೆ ಪೂರ್ಣಗೊಂಡಿದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**1(ಬಿ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ವಾಹನದ ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**3** ರಿಂದ **5** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ SSP ವಕೀಲರಿಂದಃ-**

ಟಿಪ್ಪರ ವಾಹನ ಯಾವ ದಿಕ್ಕಿನ ಕಡೆಗೆ ಹೋಗುತ್ತಿತ್ತು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಗುನ್ಹೆಸ್ಥಳ ಚೆಕ್ಕುಬಂದಿ ಈಗ ನನಗೆ ನೆನಪಿಲ್ಲ. ಚಾಸಾ 1, 2 ರವರು ನಮ್ಮ ಕಚೇರಿ ಪ್ರಕರಣಗಳಲ್ಲಿ ಜಪ್ತಿ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜೀಪಿನ ಬೆಳಕಿನ ಸಹಾಯದಿಂದ ಜಪ್ತಿ ಪಂಚನಾಮೆ ಬರೆದಿರುತೇವೆ. ಜಪ್ತಿ ಪಂಚನಾಮೆಯಲ್ಲಿ ಟಿಪ್ಪರನ ಬಣ್ಣವನ್ನು ತಿಳಿಸಿಲ್ಲ. ಗುಡ್ಡೆವಾಡ ಗ್ರಾಮದಲ್ಲಿ ಭೀಮಾ ನದಿಗೆ ಸಂಪರ್ಕ ಇಲ್ಲ ಎಂದರೆ ಸರಿಯಲ್ಲ. ಕಚೇರಿ ಅಂಕಿ ಸಂಖ್ಯೆಗೋಸ್ಕರ ಆರೋಪಿ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ